**ಸೋಮವಾರಪೇಟೆ ಪ್ರಧಾನ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿಸಿ ನಂಃ 926/**2022**

**ಪಿರ್ಯಾದಿ ಃ** **ಶ್ರೀ. ಎನ್.ಎಸ್.ಜಯರಾಮ್,**
**ಸಾಮಾನ್ಯ ಅಧಿಕಾರ ಪತ್ರ ಪಡೆದವರು**
**ಚೇತನ್ ಬಿ.ಎನ್.**

ಃವಿಃ

**ಆರೋಪಿ ಃ** **ಹೆಚ್.ಆರ್.ರಘುಕುಮಾರ್,**

**ಆಪಾದನೆ**

**ಶ್ರೀ.ಕೆ.ಗೋಪಾಲ ಕೃಷ್ಣ,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ. ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ

ಆರೋಪಿ ಃ **ಹೆಚ್.ಆರ್.ರಘುಕುಮಾರ್ ತಂದೆ. ರಾಜಶೆಟ್ಟಿ ಹಾಲಗೋಟೆ ರಸ್ತೆ, ಹೆಬ್ಬಾಳ ಅಂಚ ಕುಶಾಲನಗರ ತಾಲ್ಲೋಕು , ಕೊಡಗು ಜಿಲ್ಲೆ .**

ಈ ಕೆಳಗಿನಂತೆ ಅಪಾದನೆಯನ್ನು ಹೊರೆಸಿದ್ದೆನೆ.

ನೀವು ಪಿರ್ಯಾದುದಾರರಿಗೆ 9,50**,000/-** ರೂ ಗಳನ್ನು ಕೊಡಬೇಕಾಗಿದ್ದು, ಸದರಿ ಹಣವನ್ನು ಆದಷ್ಟು ಬೇಗ ಮರುಪಾವತಿ ಮಾಡುವುದಾಗಿ ಆಶ್ವಾಸನೆ ನೀಡಿರುವಿರಿ. ಸದ್ರಿ **ಹಣ** ದ ಮರುಪಾವತಿಗಾಗಿ ದಿನಾಂಕಃ 20**.**09**.**2022 **ನ್ನು ನಮೂದಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ., ಕುಶಾಲನಗರ ಶಾಖೆಯ ಚಕ್** ನಂಃ 518929 ರ ಚಕ್‌ನ್ನು ಪಿರ್ಯಾದಿ ಹೆಸರಿಗೆ ನಗದಾಗುವಂತೆ ನೀಡಿರುತ್ತಿರಿ. ಪಿರ್ಯಾಧಿ ಸ ದ್ರಿ ಚಕ್ಕನ್ನು **ಕರ್ನಾಟಕ ಬ್ಯಾಂಕ್, ನಗರೂರು ಶಾಖೆಗೆ** ಹಾಜರುಪಡಿಸಿದಾಗ ಸದ್ರಿ ಚಕ್ಕು “Funds Insufficient and Drawer's signature incomplete/illegible/differs/required” ಎಂಬ ಹಿಂಬರಹದೊಂದಿಗೆ ವಾಪಾಸ್ಸು ಬಂ ದಿರುತ್ತದೆ. ನಂತರ ಕಾನೂನು ರೀತ್ಯಾ ದಿನಾಂಕಃ03**.**10**.**2022ರಂದು ನೊಂದಾಯಿತ **ಹಾಗೂ ಜರೂರು** ಅಂಚೆಯ ಮೂಲಕ ನಿಮಗೆ ನೋಟಿಸನ್ನು ನೀಡಿದರು ನೀವು ಹಣವನ್ನು ಪಾವತಿಸಿಲ್ಲ ಹಾಗೂ ಉತ್ತರವನ್ನು ನೀಡಿಲ್ಲ, ಇದು 138, 142 ಎನ್.ಐ.ಆ್ಯಕ್ಟ ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವೆಸಗಿದ್ದೀರಿ.

ಪ್ರಃ1 ಈಗ ಓದಿ ವಿವರಿಸಿದ ಅಪಾದನೆ ತಿಳಿದಿದೆಯಾ**?**

ಉಃ

ಪ್ರಃ2 ಮೇಲಿನ ಅಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ರಕ್ಷಣೆ ಇದೆಯಾ**?**

ಉಃ

**ಸಹಿ/-**

**ದಿಃ** 24**.**02**.**2023**.** ಪ್ರ ದಂ ನ್ಯಾ ದಂ ,ಸೋಮವಾರಪೇಟೆ